ಕೆ. ಜಿ. ಎಫ್. ನಲ್ಲಿ ಕರಾರಿನ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ

೬೭೨. ಶ್ರೀ ಆರ್. ವೆಂಕಟರಾಮಯ್ಯ (ಶ್ರೀ ಟಿ. ಎಸ್. ಮಣಿ ಅವರ ಪರವಾಗಿ):— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧ ರಾಜ್ಯದ ನಗರ ಮತ್ತು ಪಟ್ಟಣಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು ? ಅದರಲ್ಲಿ ಕೋಲಾರ ಜಿಲ್ಲೆಯಲ್ಲಿ ಎಷ್ಟಿದೆ ?

೨ ಕೆ ಜಿ ಎಫ್ ಜಿಲ್ಲೆಯ ಅತಿ ದೊಡ್ಡ ನಗರವಾಗಿದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವಿಲ್ಲದಿರುವುದು ಅಲ್ಲದೆ ಗೌರಿಬಿದನೂರಿನಂಹ ಪಟ್ಟಣದಲ್ಲಿ ವಿಶಾಲವಾದ ಬಸ್ ನಿಲ್ದಾಣವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩ ಲೋಕೋಪಯೋಗಿ ಸಚಿವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣದ ನಿವೇಶನಕ್ಕಾಗಿ ಪ್ರಸ್ತಾಪ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು):—

೧ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯ ನಗರಗಳಲ್ಲಿಯೂ, ೮ ಜಿಲ್ಲಾ ಕೇಂದ್ರಗಳಲ್ಲಿಯೂ, ೮೫ ತಾಲ್ಲೂಕು ಕೇಂದ್ರಗಳಲ್ಲಿಯೂ ೨೮ ಇತರ ಪಟ್ಟಣಗಳಲ್ಲಿಯೂ ಮತ್ತು ಳಿಳ ಬಸ್ ನಿಲ್ದಾಣಗಳನ್ನು ನಗರ ಮತ್ತು ಪಟ್ಟಣಗಳಲ್ಲದ ಸ್ಥಳಗಳಲ್ಲಿ ಹೊಂದಿದೆ.

ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೋಲಾರ ಹಾಗೂ ಚಿಂತಾಮಣಿಯಲ್ಲಿ ಬಸ್ ನಿಲ್ದಾಣವನ್ನು ಹೊಂದಿದೆ.

೨ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೆ ಜಿ ಎಫ್ ನಲ್ಲಿ ಸೂಕ್ತವಾದ ನಿವೇಶನವನ್ನು ಹುಡುಕುತ್ತಿದೆ. ನಿವೇಶನ ಸಿಕ್ಕಿದ ಕೂಡಲೇ ಆರ್ಥಿಕ ಸಂಪನ್ಮೂಲವನ್ನು ಅವಲಂಬಿಸಿ ಒಂದು ನವೀನ ಮಾದರಿಯ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು ಆದಾಗ್ಯೂ ಸಂಸ್ಥೆಯು ಗೌರಿಬಿದನೂರಿನಲ್ಲಿ ತನ್ನದೇ ಆದ ಬಸ್ ನಿಲ್ದಾಣವನ್ನು ಹೊಂದಿರುವುದಿಲ್ಲ.

೩ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ವಿಷಯದಲ್ಲಿನ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸದರಿ ಐ. ಬಿ. ಮತ್ತು ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಪಹಿಸಿಕೊಡುವುದು ಸಾಧವಿಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ:— ಮಾನ್ಯ ಅಧ್ಯಕ್ಷರೇ ನಮ್ಮ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳ ಪೈಕಿ ಎರಡು ತಾಲ್ಲೂಕುಗಳಲ್ಲಿ ಮಾತ್ರ ಬಸ್ ನಿಲ್ದಾಣಗಳನ್ನು ಕೊಟ್ಟಿದ್ದಾರೆ. ಇನ್ನು ಒಂಭತ್ತು ತಾಲ್ಲೂಕು ಕೇಂದ್ರಗಳಲ್ಲಿ ಬಸ್ ನಿಲ್ದಾಣಗಳನ್ನು ಕೊಡಬೇಕಾಗಿದೆ ಅದನ್ನು ಯಾವಾಗ ಕೊಡಿಸುತ್ತೀರಿ ? ಮುಳಬಾಗಿಲು, ಕೆ. ಜಿ ಎಫ್. ಮತ್ತು ಚಿಕ್ಕಬಳ್ಳಾಪುರಕ್ಕೆ ಯಾವಾಗ ಕೊಡುತ್ತೀರಿ ? ಕೆ. ಜಿ. ಎಫ್. ಸಿಟಿ ಮುನಸಿಪಾಲಿಟಿಯಾಗಿದ್ದು ಐದು ಲಕ್ಷ ಜನ ಸಂಖ್ಯೆ ಇರುತ್ತದೆ. ಅಂಥ ದೊಡ್ಡ ನಗರದಲ್ಲಿ ಬಸ್ ನಿಲ್ದಾಣವಿರುವುದಿಲ್ಲ. ಈಗಿರತಕ್ಕಂಥ ಬಸ್ ನಿಲ್ದಾಣದಲ್ಲಿ ಮೂರು ಸಾಲ್ಕು ಬಸ್ಸುಗಳು ಮಾತ್ರ ನಿಲ್ಲುವಂತಿರುತ್ತದೆ ಸೂಕ್ತವಾದ ಜಾಗ ಲೋಕೋಪಯೋಗಿ ಇಲಾಖೆ ಐ. ಬಿ. ಹತ್ತಿರ ಇರುತ್ತದೆ. ಅಲ್ಲಿ ಬಸ್ ನಿಲ್ದಾಣವನ್ನು ಮಾಡುತ್ತೇವೆಂದು ಹೇಳಿದ್ದರು. ಅದನ್ನಾದರೂ ತೆಗೆದುಕೊಂಡು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡಬೇಕೆಂದು ಹೇಳುತ್ತೇನೆ.

೧೧–೩೦ ಎ. ಯಂ.

ಶ್ರೀ ಪಿ. ಜಿ. ಆರ್. ಸಿಂಧ್ಯ:— ಕೋಲಾರ ಜಿಲ್ಲೆಯಲ್ಲಿ ೧೧ ತಾಲೂಕುಗಳ ಪೈಕಿ ೯ ತಾಲ್ಲೂಕು ಕೇಂದ್ರಗಳಿಗೆ ಬಸ್ ನಿಲ್ದಾಣ ಇಲ್ಲದಿರುವುದು ನಿಜ. ಕೋಲಾರ ಜಿಲ್ಲೆ ಸಂಪೂರ್ಣವಾಗಿ ರಾಷ್ಟ್ರೀಕರಣವಾಗದೆ ಇರುವುದರಿಂದ (ಸ್ವಲ್ಪ ಭಾಗ ಮಾತ್ರ ರಾಷ್ಟ್ರೀಕರಣವಾಗಿರುವುದರಿಂದ) ಅದಕ್ಕೆ ಈ ವರ್ಷದಲ್ಲಿ ಆದ್ಯತೆ ಕೊಡುವುದಕ್ಕಾಗಿಲ್ಲ. ರಾಷ್ಟ್ರೀಕರಣ ಕಾರ್ಯಕ್ರಮ ಈಗ ನಮ್ಮ ಮುಂದಿರುವುದರಿಂದ ಆದ್ಯತೆಯ ಆಧಾರದ ಮೇಲೆ ಕೋಲಾರ ಜಿಲ್ಲೆಯ ಎಲ್ಲ ೯ ತಾಲ್ಲೂಕು ಕೇಂದ್ರಗಳಿಗೂ ಬಸ್

ನಿರ್ಮಾಣವನ್ನು ಕಟ್ಟಲಿಕ್ಕೆ ಕ್ರಮ ಕೈಗೊಳ್ಳಲಾಗುವುದು. ಮೊದಲನೆಯದಾಗಿ ಚಿಕ್ಕಬಳ್ಳಾಪುರ ಬಸ್ ನಿಲ್ದಾಣದ ಕಟ್ಟಡಕ್ಕೆ ಈಗಾಗಲೇ ಶಂಕುಸ್ಥಾಪನೆಯಾಗಿದೆ. ಕೆಲಸ ಪ್ರಾರಂಭವಾಗುತ್ತಿದೆ. ಗೌರಿಬಿದನೂರು ಮತ್ತು ಮುಳಬಾಗಿಲಿನಲ್ಲಿ ಈ ವರ್ಷ ಬಸ್ ನಿಲ್ದಾಣವನ್ನು ಕಟ್ಟುತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಕೆ. ಜಿ. ಎಫ್. ನಲ್ಲಿ ಬಸ್ ನಿಲ್ದಾಣವನ್ನು ಕಟ್ಟಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರೂ ಲೋಕೋಪಯೋಗಿ ಇಲಾಖೆಯಿಂದ ಜಾಗವನ್ನು ಕೊಡುವುದಕ್ಕಾಗುವುದಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ಅಭಿಪ್ರಾಯಪಟ್ಟಿರುವುದರಿಂದ ಅಲ್ಲಿ ಕಟ್ಟಲಿಕ್ಕೆ ಆಗುತ್ತಿಲ್ಲ. ಬೇರೆ ಜಾಗಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಜಾಗ ಸಿಕ್ಕಿದ ತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.— ಐ. ಬಿ. ಎದುರುಗಡೆ ಟೆಂಪರರಿಯಾಗಿ ಬಸ್ ನಿಲ್ದಾಣವನ್ನು ಮಾಡಿ ಕೊಂಡು ಸರ್ಕಾರಿ ಬಸ್ಸುಗಳು ನಿಲ್ಲುತ್ತಿವೆ ಅಲ್ಲಿ ೨೦ ಎಕರೆ ಖಾಲಿ ಜಾಗ ಉಂಟು. ಮೊದಲಿದ್ದ ಬಸ್ ನಿಲ್ದಾಣದ ಜಾಗವನ್ನು ಉಪಯೋಗಿಸುತ್ತಿಲ್ಲ. ಅಲ್ಲಿ ಜಮೀನಿಗೇನು ಕೊರತೆ ಇಲ್ಲ. ಆದ್ದರಿಂದ ಆ ಜಾಗದಲ್ಲಾದರೂ ಪ್ರಾರಂಭಿಸಿ. ಅಲ್ಲಿ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ನಿಂತುಕೊಳ್ಳುವುದಕ್ಕೂ ಸಹ ತೊಂದರೆ ಇದೆ. ಅಲ್ಲಿ ಬಸ್ ನಿಲ್ದಾಣಕ್ಕೆ ಬಹಳ ದಿನಗಳಿಂದ ಬೇಡಿಕೆ ಇದೆ. ಅದನ್ನು ಬೇಗ ಮಾಡಿಸ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಜಾಗ ಸಿಕ್ಕಿದ ತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಅಧ್ಯಕ್ಷರು.— ಮಾನ್ಯ ಕಾನಡೆಯವರೆ, ತಮ್ಮ ಪ್ರಶ್ನೆ ಮುಂದಕ್ಕೆ ಹೋಗಿದೆ. ಏಕೆಂದರೆ ಮಂತ್ರಿಗಳು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಜಿ. ಎಂ. ಕಾನಡೆ.— ನಾನು ಏನು ಪ್ರಶ್ನೆ ಹಾಕಿದರೂ ಇದೇ ರೀತಿ ಹೇಳುತ್ತಿರಲ್ಲ.

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ ಅವರಂ ಟೈಂ ಕೇಳಿದ್ದಾರೆ, ಕೊಟ್ಟಿದ್ದೇನೆ.

ಶ್ರೀ ಜಿ. ಎಂ. ಕಾನಡೆ.— ಎಂಥ ಟೈಮು ? ಶಾಸಕರಿಗೆ ಬೇರೆ ಏನೂ ಕೆಲಸ ಇಲ್ಲವೆ ? ನೀವು ಆ ಪ್ರಶ್ನೆ ಏನಿದೆ ಎಂಬುದನ್ನು ನೋಡಿದ್ದೀರಾ ?

ಅಧ್ಯಕ್ಷರು.— ನಿಮಗೆ ನಾನು ೨೯ಕ್ಕೆ ಉತ್ತರ ಕೊಡಿಸುತ್ತೇನೆ, ಕುಳಿತುಕೊಳ್ಳಿ.

ಶ್ರೀ ಜಿ ಎಂ. ಕಾನಡೆ.— ನೀವು ೧೧ನೇ ಸಲ ಈ ರೀತಿ ಹೇಳುತ್ತಿರುವುದು. ೨೯ಕ್ಕೆ ಅಂದರೆ ಆಗುವುದಿಲ್ಲ. ಅವತ್ತು ಯಾಪದೇ ಕಾರ್ಯಕ್ರಮ ನಡೆಯುವುದಿಲ್ಲ.

ಅಧ್ಯಕ್ಷರು.— ಆದಷ್ಟು ಬೇಗ ನಿಮಗೆ ಉತ್ತರ ತರಿಸಿಕೊಡುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಜಿ. ಎಂ. ಕಾನಡೆ.— ನಮಗೆ ಇಂಥ ದಿವಸ ಎಂದು ಖಚಿತವಾಗಿ ಹೇಳಬೇಕು. ಅಧಿಕಾರಿಗಳ ಇವರೆ ಮಾತು ಕೇಳುವುದಿಲ್ಲ.

ಅಧ್ಯಕ್ಷರು.— ಈ ತರಹ ಮಾಡಿದರೆ ಉತ್ತರ ಸಿಗುತ್ತದೆಯೇ ?

ಶ್ರೀ ಜಿ. ಎಂ. ಕಾನಡೆ.— ಯಾವಾಗ ಕೊಡಿಸುತ್ತೀರಿ ಖಚಿತವಾಗಿ ಹೇಳಿ.

ಅಧ್ಯಕ್ಷರು.— ೨೯ಕ್ಕೆ ಉತ್ತರ ಕೊಡಿಸುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಎಂ. ಕಾನಡೆ.— ೨೯ಕ್ಕೆ ಕಲಾಪ ಇಲ್ಲ. ತಾವು ಸತ್ಯಕ್ಕೆ ದೂರವಾದ ಸಂಗತಿಯನ್ನು ಹೇಳುತ್ತಿದ್ದೀರಿ.

ಅಧ್ಯಕ್ಷರು.— ಒಟ್ಟಿನೇ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಮಂಹಮದ್ ಲೈಕುದ್ದೀನ್.— ನನ್ನ ಪ್ರಶ್ನೆ ಏನಾಯಿತು ಸ್ವಾಮಿ ?

ಅಧ್ಯಕ್ಷರು. — ನಿಮ್ಮ ಪ್ರಶ್ನೆ ಸಂಬಂಧಪಟ್ಟ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ. ಮತ್ತೊಂದು ದಿವಸ ನಿಮ್ಮ ಪ್ರಶ್ನೆ ಬರುತ್ತದೆ ಕುಳಿತುಕೊಳ್ಳಿ ಅದು ಬೇರೆ ಇಲಾಖೆಗೆ ಹೋಗಿರುವುದರಿಂದ ಆ ಇಲಾಖೆಯವರು ಎಂದು ಉತ್ತರ ಕೊಡುತ್ತಾರೋ ಅವತ್ತು ಕೊಡಿಸುತ್ತೇನೆ ಈಗ ಕುಳಿತುಕೊಳ್ಳಿ.